ಕರ್ನಾಟಕ ಸರ್ಕಾರ
(ತಾಂತ್ರಿಕ ಶಿಕ್ಷಣ ಇಲಾಖೆ)

ಸಂಖ್ಯೆ: ಡಿಟಿಇ 13 ಎಲ್‌ಆರ್‌ಡಿಸಿ 2023 (E-1213038)

ಆಯುಕ್ತರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆ ರಸ್ತೆ, ಬೆಂಗಳೂರು
ದಿನಾಂಕ:26/12/2024

**ಸುತ್ತೋಲೆ**

ವಿಷಯ: 45ನೇ ರಾಜ್ಯಮಟ್ಟದ ಅಂತರ-ಪಾಲಿಟೆಕ್ನಿಕ್ ಕ್ರೀಡಾಕೂಟದಲ್ಲಿ ಭಾಗವಹಿಸುವ ಪಾಲಿಟೆಕ್ನಿಕ್ ಸಂಸ್ಥೆಗಳಿಗೆ ನೋಂದಣಿ ಶುಲ್ಕವನ್ನು ನಿಗದಿಪಡಿಸಿರುವ ಬಗ್ಗೆ

ಉಲ್ಲೇಖ:
1. ಮಾನ್ಯ ಆಯುಕ್ತರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ಸಭಾ ನಡವಳಿಗಳು ದಿ:11/09/2024
2. ಈ ಕಚೇರಿ ಸಮಪತ್ರ, ದಿನಾಂಕ:19-12-2024

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2024-25ನೇ ಸಾಲಿನ 45ನೇ ರಾಜ್ಯಮಟ್ಟದ ಅಂತರ- ಪಾಲಿಟೆಕ್ನಿಕ್ ಕ್ರೀಡಾಕೂಟವನ್ನು ಕರ್ನಾಟಕ (ಸರ್ಕಾರಿ) ಪಾಲಿಟೆಕ್ನಿಕ್, ಮಂಗಳೂರು ಇಲ್ಲಿ ದಿ: 06/01/2025 ರಿಂದ 08/01/2025 ರವರೆಗೆ ಆಯೋಜಿಸಲಾಗುತ್ತಿದೆ.

ಸದರಿ ಕ್ರೀಡಾಕೂಟದಲ್ಲಿ ಭಾಗವಹಿಸುವ ಕ್ರೀಡಾಪಟುಗಳ ನೋಂದಣಿ ಶುಲ್ಕವನ್ನು ಪ್ರತಿ ಕ್ರೀಡೆಗೆ ರೂ.10/-ರಿಂದ ರೂ.25/-ಕ್ಕೆ ಹೆಚ್ಚಿಸಿ ನಿಗದಿಪಡಿಸಲಾಗಿದೆ.

ಕ್ರೀಡಾಕೂಟದಲ್ಲಿ ಭಾಗವಹಿಸುವ ಸರ್ಕಾರಿ / ಅನುದಾನಿತ / ಖಾಸಗಿ ಪಾಲಿಟೆಕ್ನಿಕ್ ಸಂಸ್ಥೆಗಳ ನೋಂದಣಿ ಶುಲ್ಕವನ್ನು ಈ ಕೆಳಕಂಡ ಕೋಷ್ಟಕದಲ್ಲಿರುವಂತೆ ನಿಗದಿಪಡಿಸಲಾಗಿದೆ.

| ಕ್ರ.ಸಂ | ಸಂಸ್ಥೆ | ಸಂಸ್ಥೆಗಳಿಗೆ ಶುಲ್ಕ ನಿಗದಿ ಬಗ್ಗೆ |
|---|---|---|
| 1 | ಸರ್ಕಾರಿ | ರೂ.2,000/- |
| 2 | ಅನುದಾನಿತ | ರೂ.15,000/- |
| 3 | ಖಾಸಗಿ | ರೂ.15,000/- |

ಆದುದರಿಂದ ಕ್ರೀಡಾಕೂಟದಲ್ಲಿ ಭಾಗವಹಿಸುವ ಪಾಲಿಟೆಕ್ನಿಕ್ ಸಂಸ್ಥೆಗಳ / ಕ್ರೀಡಾಪಟುಗಳ ( ವಿದ್ಯಾರ್ಥಿಗಳು) ನೋಂದಣಿ ಶುಲ್ಕವನ್ನು ಸಂಸ್ಥೆಯ ಕ್ರೀಡಾನಿಧಿಯಿಂದ ಪಾವತಿಸಲು ಪ್ರಾಂಶುಪಾಲರುಗಳು ಕ್ರಮವಹಿಸಲು ಸೂಚಿಸಲಾಗಿದೆ.

ಜಂಟಿ ನಿರ್ದೇಶಕರು (ಪ್ರಭಾರ)

**ವಿಶೇಷ ಸೂಚನೆ** :

1. ಸದರಿ ಕ್ರೀಡಾಕೂಟದಲ್ಲಿ ಭಾಗವಹಿಸುವ ಪಾಲಿಟೆಕ್ನಿಕ್ ಸಂಸ್ಥೆಗಳ / ಕ್ರೀಡಾಪಟುಗಳ ನೋಂದಣಿ ಶುಲ್ಕವನ್ನು ಕಡ್ಡಾಯವಾಗಿ ಪಾಲಿಟೆಕ್ನಿಕ್ ಸಂಸ್ಥೆಯ ಕ್ರೀಡಾ ನಿಧಿಯಿಂದಲೇ ಭರಿಸಲು ಕ್ರಮವಹಿಸುವುದು.
2. ಸದರಿ ಕ್ರೀಡಾಕೂಟದಲ್ಲಿ ಭಾಗವಹಿಸುವ ಕ್ರೀಡಾಪಟುಗಳಿಂದ (ವಿದ್ಯಾರ್ಥಿಗಳಿಂದ) ನೋಂದಣಿ ಶುಲ್ಕವನ್ನು ಸಂಗ್ರಹಿಸದಿರಲು ಪ್ರಾಂಶುಪಾಲರುಗಳು ಕ್ರಮವಹಿಸುವುದು.

ಇವರುಗಳಿಗೆ : 1. ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್‌ಗಳ ಪ್ರಾಂಶುಪಾಲರುಗಳ ಗಮನಕ್ಕೆ– ಸೂಕ್ತ ಕ್ರಮಕ್ಕಾಗಿ
2. ಇ-ಗವರ್ನೆನ್ಸ್ ವಿಭಾಗಕ್ಕೆ– ಇಲಾಖೆಯ ಅಂತರ್ಜಾಲದಲ್ಲಿ ಪ್ರಚುರ ಪಡಿಸಲು

ಪ್ರತಿ: ಎಲ್.ಆರ್.ಡಿ.ಸಿ. ಕಡತಕ್ಕೆ